ಸೃಜನಶೀಲತೆಗೆ ಧಕ್ಕೆ ತರುವ ಕ್ರಿಯೆಗಳೆಂದು ಭಾವಿಸುವ ಪೂರ್ವನಿಶ್ಚಿತ ಅಭಿಮತದ 'ವಿಮರ್ಶೆ'ಯಿಂದ ಅಪಾಯ ತಟ್ಟಿದೆ. ಆದರೆ, ಹೊಸ ಬರಹಗಾರರಿಗೆ ಅಭಿವ್ಯಕ್ತಿಯ ಆತ್ಮವಿಶ್ವಾಸ ತುಂಬಿದ್ದರಲ್ಲಿ ದಲಿತ ಬಂಡಾಯ ಸಾಹಿತ್ಯ ಸಂಘಟನೆಯ ಪಾತ್ರ ಬಹುದೊಡ್ಡದು. ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ಕೊಟ್ಟ ಮತ್ತು ಕೊಡುತ್ತಿರುವ ಎಲ್ಲ ಸಾಮಾಜಿಕ ಕಳಕಳಿಯ ಬರಹಗಾರರಿಗೆ ತಮ್ಮದೇ ತಾಯ್ತನದ ಆಸರೆಯಿದೆಯೆಂಬ ಭರವಸೆಯನ್ನು ಈ ಸಂಘಟನೆಗಳು ಕೊಟ್ಟಿವೆ. ಎಲ್ಲ ಏರಿಳಿತಗಳ ನಡುವೆಯೂ ಚಳವಳಿ ಪ್ರಜ್ಞೆಯು ಜೀವಂತವಾಗಿರುವುದಕ್ಕೆ ಕರ್ನಾಟಕದ ಅನೇಕ ಪ್ರಗತಿಪರ ಸಂಘಟನೆಗಳು ಕಾರಣವಾಗಿವೆ.

ಸಂಘಟನೆ ಮತ್ತು ಸಾಹಿತ್ಯ ಸೃಷ್ಟಿಯ ಸಂಬಂಧವನ್ನು ಹದಗೊಳಿಸಿಕೊಳ್ಳುವಲ್ಲಿ ಒಂದಿಷ್ಟು ಸಮಸ್ಯೆ ಹಾಗೂ ಸವಾಲುಗಳು ಇರುವುದು ನಿಜ. ಪ್ರತಿಭಾಶಾಲಿಗಳು ಈ ಸಮಸ್ಯೆ ಮತ್ತು ಸವಾಲುಗಳಿಗೆ ಸಮರ್ಥವಾಗಿಯೇ ಉತ್ತರಿಸಿಕೊಳ್ಳುತ್ತಾರೆ. ಉತ್ತರಿಸಿದ್ದಾರೆ ಕೂಡ. ಇವರೆಲ್ಲ ಹೊಸ ರೀತಿಯ ಬರವಣಿಗೆ ಮಾಡಿದ್ದಾರೆ. ನೋಡುವ ದೃಷ್ಟಿಕೋನದಲ್ಲೂ ಬದಲಾವಣೆ ಅಗತ್ಯ. ಅಂತೆಯೇ, ಸಂಘಟನೆಯ ಭಾಗಿದಾರರಿಗೆ ಸಾಹಿತ್ಯ ಸಂವೇದನೆಯ ಕಾಡುವಿಕೆಯೂ ಅಗತ್ಯ. ಮೆರವಣಿಗೆಯಲ್ಲಿದ್ದೂ ಮೌನ ಮನಃಸ್ಥಿತಿಯನ್ನು ಅನುಭವಿಸಲು ಸಾಧ್ಯವಾದವರು ಸಂವೇದನೆಯ ಸೂಕ್ಷ್ಮಗಳಿಗೆ ತೆರೆದುಕೊಳ್ಳುತ್ತಾರೆ. ಹಾಗೆಂದು ಸಂವೇದನೆಯು ಸಿದ್ಧಮಾದರಿಯಾಗಬೇಕಿಲ್ಲ. ಸಂಘಟನೆಯೊಳಗಿದ್ದೂ ಹೊರನಿಂತು ನೋಡುವ ಒಳನೋಟಗಳಿಂದ ಸಾಹಿತ್ಯ ಸೃಷ್ಟಿಗೆ ವಿಶಿಷ್ಟ ಆಯಾಮ ಒದಗುತ್ತದೆ. ಸಂಘಟನೆಯನ್ನು ಸಮೀಪ ಮತ್ತು ದೂರಗಳಿಂದ ನೋಡುವ ಮಾನಸಿಕತೆ ಕೂಡ ಮುಖ್ಯವಾಗುತ್ತದೆ. ಇದು ವೈರುಧ್ಯಗಳನ್ನು ಎದುರಿಸುವ ಪ್ರಕ್ರಿಯೆ. ಏಕಮುಖಿಯಾಗದ ಒಳವಿಮರ್ಶೆಯಿಂದ ಸಾಧ್ಯ. ಜಗತ್ತಿನ ಬಹುದೊಡ್ಡ ಕ್ರಾಂತಿಕಾರರು ಹೇಳಿದ ವಿಮರ್ಶೆ ಮತ್ತು ಆತ್ಮವಿಮರ್ಶೆಯ ಪ್ರತಿಪಾದನೆ ನನಗೆ ಮುಖ್ಯವೆನಿಸುತ್ತದೆ. ಇದು ಸಂಘಟನೆಯ ಒಳಗಿದ್ದವರಿಗೆ ಮಾತ್ರವಲ್ಲ, ಹೊರಗಿದ್ದವರಿಗೂ ಇರಬೇಕಾದ ಗುಣ. ಆಗ ಪೂರ್ವಗ್ರಹದ ಪಾಪಕ್ಕೆ ಅವಕಾಶವಿರುವುದಿಲ್ಲ. ನನ್ನ ಸಾಹಿತ್ಯ ಮಾತ್ರವಲ್ಲ, ಬಂಡಾಯದ ಹಲವು ಲೇಖಕರ ಸಾಹಿತ್ಯ ಅನೇಕ ವಿಮರ್ಶಕರ ಪೂರ್ವಗ್ರಹದ ಪಾಪಕ್ಕೆ ಬಲಿಯಾಗಿದೆ. ಒಮ್ಮೆ ಯು.ಆರ್. ಅನಂತಮೂರ್ತಿ ಸಭೆಯೊಂದರಲ್ಲಿ ಹೇಳಿದ್ರು, 'ನಾವು ಬರಗೂರರನ್ನು ನಿರ್ಲಕ್ಷ್ಯ ಮಾಡಿದ್ದೇವೆ. ಅವರನ್ನು ಇನ್ನಷ್ಟು ಗಂಭೀರವಾಗಿ ಓದಬೇಕಾಗಿತ್ತು' ಅಂತ. ಅವರು ಹಾಗೆ ಹೇಳಿದಾಗ ಅವರಿಗೆ ಎಂಬತ್ತು ವರ್ಷವಾಗಿತ್ತು, ನನಗೆ ಅರವತ್ತು ವರ್ಷ ವಯಸ್ಸಾಗಿತ್ತು. ನಾನು ತಮಾಷೆಗೆ ಅವರಿಗೆ ಹೇಳಿದ್ದೆ: 'ಸರ್, ಇದನ್ನೇ ನೀವು ಮೊದಲೇ ಹೇಳಿದ್ದರೆ ಇನ್ನಷ್ಟು ಉತ್ಸಾಹದಿಂದ ಬರೀತಿದ್ದೇನೇನೊ.'

> ನನ್ನ ಸಾಹಿತ್ಯ ಮತ್ತು ಸಿನಿಮಾಗಳನ್ನು ಒಳ್ಳೆಯ ಮಾದರಿ ಅಲ್ಲ ಅಂತ ಯಾರಾದ್ರೂ ಹೇಳಿದ್ರೆ ಅದು ಅವರ ಅಭಿಪ್ರಾಯ ಅಂತ ಸುಮ್ಮನಾಗ್ತೇನೆ. ಆದರೆ ಒಳ್ಳೆಯ ಮನುಷ್ಯ ಅಲ್ಲ ಅಂದ್ರೆ ಸಿಟ್ಟಾಗ್ತೇನೆ. ಒಳ್ಳೆಯ ಮನುಷ್ಯನ ಆಶಯವೆ ನನ್ನ ಸಾಹಿತ್ಯ ಮತ್ತು ಸಿನಿಮಾಗಳ ಸಂವೇದನೆ.

◆ **ಸರ್, ಇಲ್ಲಿ ಒಂದು ವಿಷಯ ಚರ್ಚೆ ಮಾಡಬಹುದೇನೊ. ಪಿ. ಲಂಕೇಶ್ ನಿಮ್ಮ ಸಾಹಿತ್ಯದ ಬಗ್ಗೆ ಒಂದು ಮಾತು ಹೇಳಿದ್ರು. ನಿಮ್ಮದು ತುಂಬಾ 'ಓಪಿನಿಯೆನೇಟೆಡ್' ಆದ ಬರಹ ಅಂತ.**